# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1367 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ ರಾಥೋಡ್ |
| ಉತ್ತರಿಸುವ ದಿನಾಂಕ | 30/12/2022 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು; (ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿರುವ ಒಟ್ಟು 23 ವಸತಿ ಶಾಲೆಗಳ ಕಾರ್ಯನಿರ್ವಹಿಸುತ್ತಿವೆ. ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ. |
| ಆ) | ಈ ವಸತಿ ಶಾಲೆಗಳು ಎಷ್ಟು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ ಹಾಗೂ ಎಷ್ಟು ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ; (ವಿವರ ಒದಗಿಸುವುದು) | |
| ಇ) | ಈ ವಸತಿ ಶಾಲೆಗಳಲ್ಲಿ ನೀಡುತ್ತಿರುವ ವಿದ್ಯಾಭ್ಯಾಸ ಹಾಗೂ ಇತರೆ ಚಟುವಟಿಕೆಗಳಾವುವು? ( ಸಂಪೂರ್ಣ ವಿವರ ಒದಗಿಸುವುದು) | ಈ ವಸತಿ ಶಾಲೆಗಳಲ್ಲಿ ನೀಡುತ್ತಿರುವ ವಿದ್ಯಾಭ್ಯಾಸ ಹಾಗೂ ಇತರೆ ಚಟುವಟಿಕೆಗಳ ಸಂಪೂರ್ಣ ವಿವರವನ್ನು ಅನುಬಂಧ-02 ರಲ್ಲಿ ನೀಡಿದೆ. |

ಸಕಇ 472 ಎಂಡಿಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-01

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂ ದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 1122(1367) ಕ್ಕೆ

ವಿಜಯಪುರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಾಲೆಗಳ ವಿವರ

| ಕ್ರ. ಸ | ಜಿಲ್ಲೆ | ತಾಲ್ಲೂಕು | ಶಾಲೆಯ ಹೆಸರು ಮತ್ತು ಸ್ಥಳ | ವರ್ಗ | ಕಟ್ಟಡ ವಿವ |
|---|---|---|---|---|---|
| 1 | ವಿಜಯಪುರ | ಇಂಡಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅಥರ್ಗ | ಪ.ಜಾತಿ | ಬಾಡಿಗೆ ಕಟ್ಟ |
| 2 | ವಿಜಯಪುರ | ವಿಜಾಪುರ | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ನಾಗಠಾಣ | ಪ.ಜಾತಿ | ಬಾಡಿಗೆ ಕಟ್ಟ |
| 3 | ವಿಜಯಪುರ | ಮುದ್ದೇಬಿಹಾಳ | ಮೊರಾರ್ಜಿ ದೇಸಾಯಿ ವಸತಿ ಶಾಲೆ ಫಾಳಪೂಜಿ | ಪ.ಜಾತಿ | ಬಾಡಿಗೆ ಕಟ್ಟ |
| 4 | ವಿಜಯಪುರ | ಮುದ್ದೇಬಿಹಾಳ | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ತಾಳೀಕೋಟೆ | ಪ.ಜಾತಿ | ಬಾಡಿಗೆ ಕಟ್ಟ |
| 5 | ವಿಜಯಪುರ | ಬಸವನ ಬಾಗೇವಾಡಿ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ನಿಡಗುಂದಿ | ಪ.ಜಾತಿ | ಬಾಡಿಗೆ ಕಟ್ಟ |
| 6 | ವಿಜಯಪುರ | ವಿಜಾಪುರ | ಡಾ: ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಮಮದಾಪುರ | ಪ.ಜಾತಿ | ಬಾಡಿಗೆ ಕಟ್ಟ |
| 7 | ವಿಜಯಪುರ | ವಿಜಾಪುರ | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ಬಬಲೇಶ್ವರ | ಪ.ಜಾತಿ | ಬಾಡಿಗೆ ಕಟ್ಟ |
| 8 | ವಿಜಯಪುರ | ವಿಜಾಪುರ | ವಸತಿ ಸಹಿತ ಪದವಿ ಪೂರ್ವ ಕಾಲೇಜು ವಿಜಯಪುರ | ಪ.ಜಾತಿ | ಬಾಡಿಗೆ ಕಟ್ಟ |
| 9 | ವಿಜಯಪುರ | ಇಂಡಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಂಥನಾಳ | ಪ.ಜಾತಿ | ಸ್ವಂತ |
| 10 | ವಿಜಯಪುರ | ಇಂಡಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮರಗೂರು | ಪ.ಜಾತಿ | ಸ್ವಂತ |
| 11 | ವಿಜಯಪುರ | ಮುದ್ದೇಬಿಹಾಳ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಲತ್ವಾಡ | ಪ.ಜಾತಿ | ಸ್ವಂತ |
| 12 | ವಿಜಯಪುರ | ಇಂಡಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಳ್ಳೊಳ್ಳಿ (ಲಚ್ಯಾಣ) | ಪ.ಜಾತಿ | ಸ್ವಂತ |
| 13 | ವಿಜಯಪುರ | ಬಿಜಾಪುರ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ತಿಕೋಟ | ಪ.ಜಾತಿ | ಸ್ವಂತ |
| 14 | ವಿಜಯಪುರ | ಬಸವನಬಾಗೇವಾಡಿ | ಮೊದೇಶಾ ಬಸವನಬಾಗೇವಾಡಿ, ಬಿಜಾಪುರ ಜಿಲ್ಲೆ | ಪ.ಜಾತಿ | ಸ್ವಂತ |
| 15 | ವಿಜಯಪುರ | ಸಿಂದಗಿ | ಮೊದೇವಶಾ ಗುಬ್ಬೇವಾಡ, ಸಿಂದಗಿ ತಾಲ್ಲೂಕು, ಬಿಜಾಪುರ ಜಿ | ಪ.ಜಾತಿ | ಸ್ವಂತ |
| 16 | ವಿಜಯಪುರ | ಬಿಜಾಪುರ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕಾರಜೋಳ, ಬಿಜಾಪು | ಪ.ಜಾತಿ | ಸ್ವಂತ |
| 17 | ವಿಜಯಪುರ | ಬಸವನಬಾಗೇವಾಡಿ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಬಸವನಬಾಗೇವಾಡಿ ( ಲ್ಲೂರ) | ಪ.ಜಾತಿ | ಸ್ವಂತ |
| 18 | ವಿಜಯಪುರ | ಇಂಡಿ | ಕಿರಾಚೆ ಶಾಲೆ, ಅಂಜುಟಗಿ ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ | ಪ.ಜಾತಿ | ಸ್ವಂತ |
| 19 | ವಿಜಯಪುರ | ಸಿಂಧಗಿ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಆಲಮೇಲ | ಪ.ಜಾತಿ | ಸ್ವಂತ |
| 20 | ವಿಜಯಪುರ | ಮುದ್ದೇಬಿಹಾಳ | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ಗೋಟಕಂಡಕಿ | ಪ.ವರ್ಗ | ಬಾಡಿಗೆ ಕಟ್ಟ |
| 21 | ವಿಜಯಪುರ | ಮುದ್ದೇಬಿಹಾಳ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಜಮ್ಮಲದಿನ್ನಿ, ಮುದ್ದೇ ಿಹಾಳ್ ತಾಲ್ಲೂಕು, ಬಿಜಾಪುರ ಜಿಲ್ಲೆ. | ಪ.ವರ್ಗ | ಸ್ವಂತ |
| 22 | ವಿಜಯಪುರ | ಇಂಡಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊರ್ತಿ | ಹಿಂ.ವರ್ಗ | ಸ್ವಂತ |
| 23 | ವಿಜಯಪುರ | ಸಿಂದಗಿ | ಮೊದೇಶಾ, ದೇವರಹಿಪ್ಪರಗಿ, ಸಿಂದಗಿ ತಾ\|\| | ಹಿಂ.ವರ್ಗ | ಸ್ವಂತ |

## <u>ಅನುಬಂಧ-02</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1122(1367) ಕ್ಕೆ**

**ವಸತಿ ಶಾಲೆಗಳಲ್ಲಿ ನೀಡುತ್ತಿರುವ ವಿದ್ಯಾಭ್ಯಾಸ ಹಾಗೂ ಇತರೆ ಚಟುವಟಿಕೆಗಳ ವಿವರ**

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ರಾಜ್ಯ ಪಠ್ಯಕ್ರಮವನ್ನು ಅನುಸರಿಸುತ್ತಿದ್ದು .ಶಾಲೆಯ ವಿದ್ಯಾರ್ಥಿಗಳ ಕಲಿಕಾ ಮಟ್ಟ ಆಧರಿಸಿ ಶಾಲೆ ಹಾಗೂ ವಿಷಯವಾರು ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಸರಿಸಲು ಕ್ರಮವಹಿಸಲಾಗುತ್ತಿದೆ.ರಾಜ್ಯ ಹಾಗೂ ಜಿಲ್ಲಾ ಹಂತದ ಕ್ರಮಗಳ ಜೊತೆಗೆ ಪ್ರತಿ ವಸತಿ ಶಾಲೆಯೂ ತನ್ನದೇ ಆದ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡು ಪ್ರಗತಿಗೆ ಶ್ರಮಿಸಲು ಪ್ರೋತ್ಸಾಹಿಸಲಾಗುತ್ತಿದೆ.

- **ವಿಷಯ ಶಿಕ್ಷಕರ ಸಂಪನ್ಮೂಲ ತಂಡ**: ಕ್ರೈಸ್ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಅತ್ಯಂತ ಹೆಚ್ಚು ಸರಾಸರಿ ಅಂಕ ಪಡೆದ ಪ್ರತಿ ವಿಷಯಕ್ಕೆ 7 ರಿಂದ 8 ಶಿಕ್ಷಕರನ್ನು ಗುರುತಿಸಿ ವಿಷಯ ಶಿಕ್ಷಕರ ಸಂಪನ್ಮೂಲ ತಂಡವನ್ನು ರಚಿಸಲಾಗಿದೆ. ಈ ತಂಡದ ಮೂಲಕ ಕೇಂದ್ರ ಕಛೇರಿಯ ಮಾರ್ಗದರ್ಶನ ಹಾಗೂ ಸಹಕಾರದೊಂದಿಗೆ ಅಧ್ಯಯನ ಸಾಮಗ್ರಿ ಸಿದ್ಧಪಡಿಸುವಿಕೆ, ಏಕರೂಪದ ವಿಷಯವಾರು ವಾರ್ಷಿಕ ಕ್ರಿಯಾಯೋಜನೆ, ಏಕರೂಪದ ಕಿರು ಪರೀಕ್ಷೆ ಹಾಗೂ ಅಭ್ಯಾಸ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಿಕೆ, ಮೌಲ್ಯಮಾಪನ ಸಾಮಗ್ರಿ, ಶಿಕ್ಷಕರೊಡನೆ ಸಮಾಲೋಚಿಸುವಿಕೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪುನರ್‌ಮನನ ಸಾಹಿತ್ಯ ಇತ್ಯಾದಿ ವಿವಿಧ ಶೈಕ್ಷಣಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

- **ಏಕರೂಪದ ಸಾಮಾನ್ಯ ಪರೀಕ್ಷೆಗಳು**: ವಿದ್ಯಾರ್ಥಿಗಳ ನೈಜ ಪ್ರಗತಿ ಆಧಾರದ ಮೇಲೆ ಕಲಿಕಾ ಕೊರತೆಯನ್ನು ಗುರುತಿಸಿ ಮುಂದಿನ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಹಾಗೂ ಏಕರೂಪದ ವಾರ್ಷಿಕ ಪಾಠಯೋಜನೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಆತ್ಮ ವಿಶ್ವಾಸ ಮೂಡಿಸಲು ಏಕ ರೂಪದ [illegible] ಪತ್ರಿಕೆಗಳನ್ನು ಇತರೆ ಶಾಲೆಗಳಿಗೆ ವಿನಿಮಯ ಮಾಡಿ ಮೌಲ್ಯಮಾಪನ ಮಾಡಿಸಿ ಕೇಂದ್ರ ಕಛೇರಿಯಲ್ಲಿ ಮಾಹಿತಿಯನ್ನು ಪಡೆದು ವಿಶ್ಲೇಷಿಸಿ ವಿವಿಧ ಕಾರ್ಯತಂತ್ರಗಳ ಮೂಲಕ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಅಲ್ಲದೇ ದಿನನಿತ್ಯ ತರಗತಿಯ ನಂತರ ಸಾಯಾಂಕಾಲ 5ರಿಂದ 8.30ರವರೆಗೆ ವಿದ್ಯಾರ್ಥಿಗಳಿಗೆ MOD (Master On Duty) ವಿಶೇಷವಾಗಿ ನಡೆಸಲಾಗುತ್ತಿದೆ.

- ಪ್ರಥಮ್ ಫೌಂಡೇಷನ್ ನ ಸಹಯೋಗದೊಂದಿಗೆ 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯ ಮೂಲ ಕಲಿಕೆಗೆ ಅನುವಾಗುವಂತೆ **Joyful English Learning Program** ಅನ್ನು ಹಮ್ಮಿಕೊಂಡಿದ್ದು, 1600 ಶಿಕ್ಷಕರಿಗೆ ತರಬೇತಿಯನ್ನು ನೀಡಿ ಎಲ್ಲಾ ವಸತಿ ಶಾಲೆಗಳ 78000 ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

- **ಒಬವ್ವ ಆತ್ಮ ರಕ್ಷಣಾ ಕರಾಟೆ ತರಬೇತಿ** ಕಾರ್ಯಕ್ರಮವನ್ನು ವಸತಿ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಅತ್ಯಂತ ಯಶಸ್ವಿಯಾಗಿ ನೀಡಲಾಗುತ್ತಿದ್ದು, ಇದರಿಂದ ಆತ್ಮವಿಶ್ವಾಸ, ಸ್ವಯಂಶಿಸ್ತು ಹಾಗೂ ನಾಯಕತ್ವದ ಗುಣಗಳೊಂದಿಗೆ ತಮ್ಮ ಜೀವನದಲ್ಲಿ ಸ್ವಯಂ ರಕ್ಷಣೆ ಮಾಡಿಕೊಳ್ಳುವ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ.

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಗೊಳಿಸುವ ಸಲುವಾಗಿ KCET/NEET/JEE ಆನ್‌ಲೈನ್ ತರಗತಿಗಳನ್ನು ನೀಡಲಾಗಿದ್ದು, ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್ ಗೆ ಪ್ರವೇಶಾತಿ ಪಡೆಯಲು ಸಹಕಾರಿಯಾಗಿದೆ.

- ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಹೆಚ್ಚಿಸಿ ಉತ್ತಮ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಜಿಲ್ಲೆ/ವಿಭಾಗ/ರಾಜ್ಯ ಹಂತದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತಿದೆ.

- ಸಂಘದ ಅಧೀನದಲ್ಲಿ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ೮ ರಿಂದ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ತಂತ್ರಜ್ಞಾನ ಆಧಾರಿತ, ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಮತ್ತು ವೃತ್ತಿಪರ ಕೌಶಲ್ಯಗಳನ್ನು ಉತ್ತೇಜನ ನೀಡುವುದರ ಜೊತೆಗೆ ಅವರ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವಂತಹ ತರಬೇತಿಯನ್ನು IBM Stem for girls ರವರ ವತಿಯಿಂದ ನೀಡಲಾಗುತ್ತಿದೆ. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯ ವ್ಯಕ್ತಿಗಳ ಮತ್ತು ಸಮಾಜಕ್ಕೆಕೊಡುಗೆ ನೀಡಿದಂತಹ ವ್ಯಕ್ತಿಗಳ ಬಗ್ಗೆ **Role Model session** ಸಹ ಹಮ್ಮಿಕೊಳ್ಳಲಾಗುತ್ತಿದೆ.

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಸಂಬಂಧಿಸಿದಂತೆ **Asha the Hope counseling & therapy centre** ರವರ ವತಿಯಿಂದ **KREIS Academic You Tube Mouth Channel** ಮೂಲಕ ಆನ್‌ಲೈನ್ ತರಗತಿಗಳನ್ನು ನೀಡಲಾಗುತ್ತಿದೆ.

***